**ವಸುಮತಿ ಉಡುಪ**

ಕಲೆ: ವೆಂಕಟ್ರಮಣ ಭಟ್

# ದಾಳಿ



ತಾನು ಉಂಡು ಬಿಟ್ಟೆದ್ದ ಬಾಳೆಲೆಗೆ ಎರಡು ಮುಷ್ಟಿ ಅನ್ನ, ಅರ್ಧ ಸೌಟಿನಷ್ಟು ಹುಳಿ ಹಾಕಿ ಕಲೆಸಿ ಬೇಲಿಯಾಚೆ ನಾಲಿಗೆ ಜೋತುಬಿಟ್ಟುಕೊಂಡು ಏಕಾಗ್ರತೆಯಿಂದ ತಪಸ್ಸಿಗೆ ಕೂತಂತೆ ಕೂತು ಕಾಯುತ್ತಿದ್ದ ನಾಯಿಗೆ ಹಾಕಿ ಬರಲು ಸುಸಂದರ್ಭ ಕಾಯುತ್ತಿದ್ದಳು ವನಿತಾ. ಎಷ್ಟು ಬಾರಿ ಕಿಟಕಿಯಲ್ಲಿ ಹಣಿಕಿ ನೋಡಿದರೂ ರಸ್ತೆಯ ಆಚೆ ಬದಿಯಲ್ಲಿದ್ದ ಅಂಗಡಿಯ ಗ್ರಾಸ್ತ ಜಾಗ ಬಿಟ್ಟೇಳುವ ಲಕ್ಷಣ ಕಾಣಿಸಿರಲಿಲ್ಲ. ಮಟಮಟ ಮಧ್ಯಾಹ್ನ. ಯಾವ ಗಿರಾಕಿ ಕೂಡಾ ಕನಿಷ್ಠ ಬೀಡಿ ವ್ಯಾಪಾರಕ್ಕೂ ಬರುವುದು ಸಾಧ್ಯವಿಲ್ಲ ಎಂದು ಇವಳಿಗೆ ಗೊತ್ತು. ಆದರೂ ಬಾಗಿಲು ಮುಚ್ಚಿ ಊಟಕ್ಕೆ ಹೋಗದೆ ಕಾದು ಕೂತಿದ್ದಾನೆ. ಹಸಿದ ನಾಯಿಗೆ ತುತ್ತು ಅನ್ನ ಹಾಕದೆ ಇರುವಷ್ಟು ನಿಷ್ಕರುಣಿ ಇವಳಲ್ಲ ಎಂದು ಅವನಿಗೆ ಗೊತ್ತಿದೆ. ಈಗಲೋ, ಇನ್ನೊಂದು ಕ್ಷಣಕ್ಕೋ ಬಾಗಿಲು ತೆಗೆದುಕೊಂಡು ಬರುತ್ತಾಳೆ ಹೊರಗೆ. ಬಂದೇ ಬರುತ್ತಾಳೆ. ಬಾಳೆಎಲೆಯಲ್ಲಿದ್ದುದನ್ನು ಉಣುಗೋಲಿನ ಬದಿಯ ಕಲ್ಲಿನ ಮೇಲೆ ಸುರಿದು ಯಾರೋ ಬೆರೆಸಿಕೊಂಡು ಬರುತ್ತಿದ್ದಾರೆ ಎನ್ನುವಂತೆ